Total No. of Questions : 61 ]

Total No. of Printed Pages : 4 ]

**Code No. 16**

**March, 2011**

# OPTIONAL KANNADA

Time : 3 Hours 15 Minutes ] [ Max. Marks : 100

***ಸೂಚನೆ :*** i) ಪ್ರಶ್ನೆಗಳ ಸಂಖ್ಯೆಗಳನ್ನು ಉತ್ತರ ಪತ್ರಿಕೆಯ ಎಡ ಭಾಗದಲ್ಲಿ ಬರೆಯಿರಿ.

ii) ಪ್ರತಿ ವಿಭಾಗದಲ್ಲಿರುವ ಸೂಚನೆಗಳಿಗೆ ಅನುಗುಣವಾಗಿ ಉತ್ತರಿಸಿ.

## ಭಾಗ – I

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ : $7 \times 1 = 7$

1) ವಿಳಾಸವನವನ್ನು ಯಾರ ರಾಣಿಯರು ಪ್ರವೇಶಿಸುತ್ತಾರೆ ?

2) ಸಾಮವೇದಿಗಳು ಶಿಷ್ಯರೊಂದಿಗೆ ಅರಣ್ಯಕ್ಕೆ ಬಂದ ಕಾರಣವೇನು ?

3) ಪಾರ್ಥ ಊರ್ವಶಿಯನ್ನು ಯಾವ ಶಬ್ದಗಳಿಂದ ಸ್ವಾಗತಿಸಿದ ?

4) ತೃಣವೇ ಪರ್ವತವಾಗುವುದು ಯಾವಾಗ ?

5) ಭರತನ ರಾಣಿಯರು ಪ್ರಾಣನಾಥನನ್ನು ನೋಡಲು ಎಲ್ಲಿಗೆ ಹೋದರು ?

6) ದೇವೇಂದ್ರ ಏತಕ್ಕಾಗಿ ಊರಿಗೆ ಹೊರಟಿದ್ದ ?

7) ಶ್ರೀ ವೀರಮಲ್ಲರಾಜ ಒಡೆಯನ ರಾಣಿಯ ಹೆಸರೇನು ?

II. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರಕ್ಕೆ ಹತ್ತರಿಂದ ಹದಿನೈದು ಪದಗಳಲ್ಲಿ ಉತ್ತರಿಸಿ : $3 \times 2 = 6$

8) ಅಗ್ನಿಯು ಖಾಂಡವ ವನವನ್ನು ದಾನ ರೂಪದಲ್ಲಿ ಪಡೆಯಬಯಸಿದ್ದು ಏಕೆ ?

9) ಇಂದ್ರನ ರಥವೇರುವ ಸಂದರ್ಭದಲ್ಲಿ ಅರ್ಜುನನು ಅಮರಾವತಿಗೆ ಹೋಗಿಬರಲು ಯಾರ್‍ಯಾರ ಅನುಮತಿ ಬೇಡುತ್ತಾನೆ ?

10) ನರನು ಸರ್ವಜ್ಞನಾಗುವ ಪರಿ ಯಾವುದು ?

11) ನಾಡು ಯಾವಾಗ ಕೆಡುತ್ತದೆ ?

12) ಭರತೇಶನು ಅರಸಿಯರಿಂದ ಯಾವಯಾವ ಕಾಣಿಕೆಗಳನ್ನು ಪಡೆದನು ?

III. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಮೂವತ್ತರಿಂದ ನಲವತ್ತು ಪದಗಳಲ್ಲಿ ಉತ್ತರಿಸಿ : $2 \times 3 = 6$

13) 'ನೀನೆ ಭುವನಕ್ಕಾರಾಧ್ಯನೈ' ಎಂಬ ಕಾವ್ಯಭಾಗ ನೀಡುವ ಸಂದೇಶವೇನು ?

14) ವೇಷಧಾರಿ ಶಿವನು ಸಾಮವೇದಿಗಳಿಗೆ ತನ್ನ ನಿಜರೂಪವನ್ನು ಹೇಗೆ ತೋರಿದ ?

[ Turn over

15) ಖಾಂಡವ ವನದ ಕಾವಲು ವ್ಯವಸ್ಥೆ ಹೇಗಿತ್ತು ? ವಿವರಿಸಿ.

16) ಊರ್ವಶಿಯ ರೋಷದ ವರ್ಣನೆಯನ್ನು ಕುಮಾರವ್ಯಾಸ ಹೇಗೆ ಮಾಡಿದ್ದಾನೆ ?

IV. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡಕ್ಕೆ ನಲವತ್ತರಿಂದ ಅರವತ್ತು ಪದಗಳಲ್ಲಿ ಉತ್ತರಿಸಿ : 2 × 5 = 10

17) ಸ್ತ್ರೀಯರು ಪ್ರಕೃತಿಯ ಬಳಿಗೆ ಬಂದು ಏನೆಂದು ಕ್ಷಮೆ ಕೇಳಿದರು ?

18) ಸಾಮವೇದಿಗಳ ಪಾಂಡಿತ್ಯ ಮತ್ತು ಪ್ರಭಾವಗಳನ್ನು ಹರಿಹರ ಕವಿ ಹೇಗೆ ವರ್ಣಿಸಿದ್ದಾನೆ ?

19) ಖಾಂಡವ ವನ ದಹನದ ಪ್ರಸಂಗದಲ್ಲಿ ಅರ್ಜುನ-ಕೃಷ್ಣರ ನಡುವೆ ನಡೆದ ಸಂವಾದದ ಸೊಗಸನ್ನು ನಿರೂಪಿಸಿ.

20) ಅರ್ಜುನನ ವ್ಯಕ್ತಿತ್ವವನ್ನು ಕುಮಾರವ್ಯಾಸ ಹೇಗೆ ಚಿತ್ರಿಸಿದ್ದಾನೆ ?

V. ಕೆಳಗಿನ ಪದ್ಯಗಳಲ್ಲಿ ಎರಡರ ಸಂದರ್ಭ ಸೂಚಿಸಿ ಮಹತ್ವವನ್ನು ತಿಳಿಸಿ : 2 × 3 = 6

21) ಪ್ರಜೆಯಂ ಪಾಲಿಸಬಲ್ಲೊಡಾತನರಸಂ ಕೈಯಾಸೆಯಂ ಮಾಡದಂ ।
ನಿಜ ಮಂತ್ರೀಶ್ವರ ತಂದೆ ತಾಯ ಸಲಹಲ್ ಬಲ್ಲಾತನೇ ಧಾರ್ಮಿಕಂ ॥
ಭಜಕಂ ದೈವದ ಭಕ್ತಿಯುಳ್ಳೊಡೆ ಭಟಂ ನಿರ್ಭೀತ ತಾನಾದವಂ ।
ದ್ವಿಜನಾಚಾರತೆಯುಳ್ಳವಂ ಹರಹರಾ ಶ್ರೀಚೆನ್ನಸೋಮೇಶ್ವರಾ ॥

22) ಉರಗನ ಹಲು ನಂಜು ಸುರಗೆಯ ಮೊನೆ ನಂಜು
ಕರುಣವಿಲ್ಲದನ ನುಡಿ ನಂಜು। ದುರ್ಜನರ
ಇರವೆಲ್ಲ ನಂಜು ಸರ್ವಜ್ಞ.

23) ಗೂಳಿ ನಡೆವ ಹೆಜ್ಜೆ ತೋರುವುದಲ್ಲದೆ
ಗಾಳಿಯ ಹೆಜ್ಜೆ ತೋರುವುದೆ
ಜಾಳುಗಳೊಳಗುಗಾಣಿಸುವುದಲ್ಲದೆ ತತ್ವ
ಶೀಲನೊಳಗ ಕಣ್ಬರಾರು.

VI. ಕೆಳಗಿನ ಸಾಲುಗಳಲ್ಲಿ ಎರಡರ ಸಂದರ್ಭವನ್ನು ಸೂಚಿಸಿ ಮಹತ್ವವನ್ನು ವಿವರಿಸಿ : 2 × 2 = 4

24) ಆಱುಂ ಋತುಗಳ ಚೆಲ್ವಂ ಕಾಣಲಾದುದು.

25) ಸೈಪಿನೊಳಲ್ಲದೆ ಕೂಡಿ ಬರ್ಕುಮೇ.

26) ಎನ್ನ ಗುರುಸಹಿತವಲ್ಲದೆ ಬಾರನೆಲೆ ದೇವ.

27) ಈ ಮಹಿಳೆ ಅಭಿನಂದನೀಯ.

## ಭಾಗ – II

VII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡಕ್ಕೆ ನಲವತ್ತರಿಂದ ಅರವತ್ತು ಪದಗಳಲ್ಲಿ ಉತ್ತರಿಸಿ : 2 × 5 = 10

28) ದೇವೇಂದ್ರ ಯಾರು ? ಅವನು ಪರೀಕ್ಷೆಯ ಆತಂಕದ ನಡುವೆಯೂ ಊರಿಗೆ ಬರಲು ಉಂಟಾದ ಕಾರಣವೇನು ?

29) ದೇವೇಂದ್ರನಿಗೆ ದಾರಿಯಲ್ಲಿ ಯಾರ್ಯಾರು ಸಹಾಯ ಮಾಡುತ್ತಾರೆ ? ಅದರ ವಿವರಗಳನ್ನು ತಿಳಿಸಿ.

30) ದೇವೇಂದ್ರನ ತಂದೆಯ ಪಾತ್ರ ಪರಿಚಯ ಮಾಡಿಕೊಡಿ.

VIII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದಕ್ಕೆ** ಅರವತ್ತರಿಂದ ಎಂಬತ್ತು ಪದಗಳಲ್ಲಿ ಪ್ರಬಂಧ ಬರೆಯಿರಿ : $1 \times 10 = 10$

31) ದೇವೇಂದ್ರನ ತಾಯಿ ಮನೆತನವನ್ನು ಹೇಗೆ ನಿಭಾಯಿಸಿದಳು ?

32) ಗಿಲ್ ಯಾರು ? ದೇವೇಂದ್ರನಿಗೂ ಅವನಿಗೂ ಇದ್ದ ಸಂಬಂಧ ಎಂತಹುದು ? ಅವನು ದೇವೇಂದ್ರನಿಗೆ ನಿರೂಪಿಸಿದ ಕಥೆಯನ್ನು ತಿಳಿಸಿ.

## ಭಾಗ – III

IX. ಕೆಳಗಿನ ಸಾಲುಗಳಲ್ಲಿ ಯಾವುದಾದರೂ **ಎರಡರ** ಸಂದರ್ಭವನ್ನು ಸೂಚಿಸಿ ಮಹತ್ವವನ್ನು ವಿವರಿಸಿ : $2 \times 2 = 4$

33) ಮಹಾಸ್ವಾಮಿ ! ನಾನು ಹುಟ್ಟಿದ್ದು ಸಾರ್ಥಕವಾಯ್ತು.

34) ನಾನು ತಿಳಿಗನ್ನಡದಲ್ಲಿಯೇ ಹೇಳಿದೆನೆಂದು ನನಗೆ ಜ್ಞಾಪಕವಣ್ಣ.

35) ನಾನೊಬ್ಬ ಗಂಡಸಾಗಿ ಹುಟ್ಟಬಾರದಾಗಿದ್ದಿತೆ; ಅಯ್ಯೊ ?

X. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ಮೂವತ್ತರಿಂದ ನಲವತ್ತು ಪದಗಳಲ್ಲಿ ಉತ್ತರಿಸಿ : $2 \times 3 = 6$

36) ಮಾದೇವಮ್ಮಣ್ಣಿ ಕೆರಳಲು ಕಾರಣವೇನು ?

37) ಉಮ್ಮತ್ತೂರಿನ ರಾಜಾದಾಯದಲ್ಲಿ ಫೌಜುಗಂದಾಯವಾಗಿ ಏನೇನು ನೀಡಬೇಕೆಂದು ಮಹಾರಾಜರು ಸೂಚಿಸಿದರು ?

38) ನಂಜಶೆಟ್ಟಿ ಮಾದೇವಮ್ಮಣ್ಣಿಯ ಕ್ಷಮೆಯನ್ನು ಹೇಗೆ ಕೋರುತ್ತಾನೆ ?

XI. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದಕ್ಕೆ** ಅರವತ್ತರಿಂದ ಎಂಬತ್ತು ಪದಗಳಲ್ಲಿ ಪ್ರಬಂಧವನ್ನು ಬರೆಯಿರಿ : $1 \times 10 = 10$

39) ಇಮ್ಮಡಿ ತಿಮ್ಮರಾಜ ಒಡೆಯರ ವ್ಯಕ್ತಿತ್ವವನ್ನು ಸವಿವರವಾಗಿ ನಿರೂಪಿಸಿ.

40) ಮಹೀಶೂರ ಪ್ರಜೆಗಳ ರಾಜಭಕ್ತಿ ನಾಟಕದಲ್ಲಿ ಹೇಗೆ ವ್ಯಕ್ತವಾಗಿದೆ ?

## ಭಾಗ – IV

XII. ಕೆಳಗಿನ ಪದಗಳಲ್ಲಿ ಯಾವುದಾದರೂ **ಎರಡಕ್ಕೆ** ಟಿಪ್ಪಣಿ ಬರೆಯಿರಿ : $2 \times 2 = 4$

41) ಶ್ವೇತ ಕೃಷ್ಣಕಾರಕ

42) ತ್ರಿಪದಿ

43) ಅರಿಷಡ್ವರ್ಗಗಳು

XIII. ಕೆಳಗಿನ ಶಬ್ದಗಳಲ್ಲಿ ಯಾವುದಾದರೂ **ನಾಲ್ಕರ** ಅರ್ಥ ತಿಳಿಸಿ : $4 \times \frac{1}{2} = 2$

44) ನನೆ

45) ಆಮ್ರ

46) ಭಾಸುರ

47) ಗುಲ್ಮ

48) ದಂಡಿಗೆ

49) ಬಲ್ಲಿದ

[ Turn over

XIV. ಕೆಳಗಿನ ಶಬ್ದಗಳಲ್ಲಿ ಯಾವುದಾದರೂ ಮೂರು ಪದಗಳಿಗೆ ಸಮಾನಾರ್ಥ ಪದಗಳನ್ನು ಬರೆಯಿರಿ : 3 × 1 = 3

50) ಇಳೆ

51) ಶಶಿ

52) ಕುಸುಮ

53) ಕಾನನ

54) ಅಗ್ನಿ

XV. ಕೆಳಗಿನ ನುಡಿಗಟ್ಟುಗಳಲ್ಲಿ ಯಾವುದಾದರೂ ಎರಡನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ : 2 × 1 = 2

55) ವೇದವಾಕ್ಯ

56) ಮೂಗುತೂರಿಸು

57) ತಲೆಬಾಗು

58) ಕಂಬಿಕೀಳು

## ಭಾಗ – V

XVI. ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ : 2 × 5 = 10

59) ಈ ಕೆಳಗಿನ ಪದ್ಯಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ತಿಳಿಸಿ :

ಧರೆ ಬಣ್ಣಿಸೆ ಸುಖವಿಡಿದಾ
ದರದಿಂದವೆ ಮೆರೆದ ಸಾಮವೇದಿಯ ವರದಿಂ
ದುರುತರ ಭಕ್ತಿಯನೀವುದು
ಕರುಣಾಕರ ದೇವ ಹಂಪೆಯ ವಿರೂಪಾಕ್ಷಂ.

60) ಈ ಕೆಳಗಿನ ಗದ್ಯಭಾಗವನ್ನು ಹೊಸಗನ್ನಡಕ್ಕೆ ಅನುವಾದಿಸಿ :

ಇತ್ತ ಮಣಮಂದಪುತ್ತೂರಿಂದೊರ್ವಂ ಪರಿತಂದು ಮೆಯಿಕ್ಕಿ ದೇವ ಇಂದೀಗಳೊರ್ವ ವೃದ್ಧ ಮಾಹೇಶ್ವರಂ ಬಂದು ಚಪ್ಪರಮಂ ಮುಱಿದು ತೋರಣಮಂ ಪಱಿದು ವೇದಿಕೆಯಂ ಕೆಡಹಿ ಬಾಯ್ಗೆ ಬಂದುದನೆಂದು ಕಯ್ಗೆ ಬಂದುದಂ ಮಾಡಿದಂ – ಇದೆಮಗಪಶಕುನಂ ಈ ಬಾರಿ ಮದುವೆಯಳವಡದು ಎನುತ್ತೆ ಅವಂ ಪೋಗಲ್.

61) ಕೆಳಗೆ ಸೂಚಿಸಿರುವ ಯಾವುದಾದರೂ ಒಂದು ವಸ್ತುವಿನ ಬಗೆಗೆ ಸ್ವಂತ ಕತೆ / ಕವಿತೆಯನ್ನು ರಚಿಸಿ :

ಅ) ದೇಶಭಕ್ತಿ

ಆ) ಪ್ರಕೃತಿ